## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2013-14ನೇ ಸಾಲಿನಲ್ಲಿ ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಸರ್ಕಾರವು ನಿಗಧಿಪಡಿಸಿದ ಶುಲ್ಕಕ್ಕಿಂತ ಅಧಿಕ ಶುಲ್ಕವನ್ನು ಪಾವತಿಸಿಕೊಳ್ಳುತ್ತಿರುವ ಬಗ್ಗೆ.

**ಓದಲಾಗಿದೆ:-**

ಸರ್ಕಾರಿ ಆದೇಶ ಸಂಖ್ಯೆ: ಇಡಿ 111 ಟಿಇಸಿ 2013 ದಿನಾಂಕ 29-07-2013.

**ಪ್ರಸ್ತಾವನೆ:-**

ಇಂಜಿನಿಯರಿಂಗ್ ಕಾಲೇಜುಗಳಲ್ಲಿ 2013-14ನೇ ಸಾಲಿಗೆ ಇಂಜಿನಿಯರಿಂಗ್ ಕಾಲೇಜುಗಳ ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಗಳಿಂದ ಸರ್ಕಾರವು ನಿಗಧಿಪಡಿಸಿದ ಶುಲ್ಕವನ್ನು ಹೊರತುಪಡಿಸಿ ವಿವಿಧ ಬಾಬ್ತುಗಳಿಗಾಗಿ ಅಧಿಕ ಮೊತ್ತವನ್ನು ಪಾವತಿಸಿಕೊಳ್ಳುತ್ತಿರುವ ಬಗ್ಗೆ ವಿದ್ಯಾರ್ಥಿ/ಪೋಷಕರಿಂದ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಹಾಗೂ ಸರ್ಕಾರಕ್ಕೆ ದೂರುಗಳು ಬರುತ್ತಿವೆ.

ಕಳೆದ ವರ್ಷವೂ ಸಹ ಇಂಜಿನಿಯರಿಂಗ್ ಪ್ರವೇಶಾತಿ ಸಮಯದಲ್ಲಿ ವಿದ್ಯಾರ್ಥಿಗಳಿಗೆ ನಿಗಧಿ ಶುಲ್ಕಕ್ಕಿಂತ ಹೆಚ್ಚುವರಿ ಮೊತವನ್ನು ಪಾವತಿಸಿಕೊಳ್ಳುತ್ತಿರುವ ಬಗ್ಗೆ ದೂರುಗಳು ಬಂದಿದ್ದು, ಸದರಿ ದೂರುಗಳನ್ನು ಏಕಸದಸ್ಯ ಸಮಿತಿಗೆ ಕಳುಹಿಸಲಾಗಿದ್ದು, ಸದರಿ ಸಮಿತಿಯು, ಕಾಲೇಜುಗಳು ರೂ. 7200/-ರಿಂದ 60,000/-ವರೆಗೆ ಹೆಚ್ಚುವರಿ ಮೊತ್ತವನ್ನು ಪಾವತಿಸಿಕೊಂಡಿರುವುದನ್ನು ಗಮನಿಸಿರುತ್ತದೆ. ಅದು ಅಲ್ಲದೆ ಕಾಲೇಜುಗಳು ಅಧಿಕ ಮೊತ್ತವನ್ನು ಪಾವತಿಸಿಕೊಳ್ಳುತ್ತಿರುವ ವಿರುದ್ಧ ಸರ್ಕಾರದ ವತಿಯಿಂದ ಹಾಗೂ ವಿ.ಟಿ.ಯು ವತಿಯಿಂದ ಸೂಚನೆ/ಸುತ್ತೋಲೆಗಳನ್ನು ಹೊರಡಿಸಲಾಗಿತ್ತು.

ಈ ಸಾಲಿನಲ್ಲಿ ಕಾಲೇಜುಗಳ ಹೆಚ್ಚುವರಿಯಾಗಿ ಮೊತ್ತವನ್ನು ಪಾವತಿಸಿಕೊಳ್ಳುತ್ತಿರುವ ವಿಷಯವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ ಈ ಸಾಲಿನಲ್ಲಿ ಅಧಿಕ ಮೊತ್ತವನ್ನು ನಿಗಧಿತ ಶುಲ್ಕಕ್ಕಿಂತ ಹೆಚ್ಚಿನ ಮೊತ್ತವನ್ನು ಪಾವತಿಸಿಕೊಳ್ಳುತ್ತಿರುವ ಕ್ರಮವನ್ನು ಈ ಸಾಲಿಗೆ ಮುಂದುವರಿಸಕೂಡದೆಂದು ಸಂಬಂಧಪಟ್ಟ ಕಾಲೇಜುಗಳಿಗೆ ತಿಳಿಸಬೇಕೆಂದು ನಿರ್ಧರಿಸಲಾಗಿದೆ.

ಮೇಲೆ ಓದಲಾದ ದಿನಾಂಕ: 29-7-2013ರ ಸರ್ಕಾರಿ ಆದೇಶದಲ್ಲಿ 2013-14ನೇ ಸಾಲಿಗೆ ಇಂಜಿನಿಯರಿಂಗ್ ಪ್ರವೇಶಾತಿಗೆ ಸಂಬಂಧಪಟ್ಟಂತೆ ವೃತ್ತಿ ಶಿಕ್ಷಣ ಕೋರ್ಸುಗಳಿಗೆ ಅಧಿನಿಯಮ 5ರ ಕಲಂ 3ರನ್ವಯ ಅಧಿನಿಯಮ ಉಪಬಂಧಗಳಿಗೆ ಅನುಸಾರವಾಗಿ ಮಾಡಿಕೊಂಡ ಸಮ್ಮತಾಭಿಪ್ರಾಯ ವ್ಯವಸ್ಥೆ ಅಥವಾ ಒಪ್ಪಂದದ ಪರಿಣಾಮಕಾರಿ ಅನುಷ್ಠಾನದ ಮೇಲ್ವಿಚಾರಣೆಯನ್ನು ನಡೆಸಲು ಡಾ:ಎಸ್.ಕೆ.ಸೈದಾಪುರ, ಮಾಜಿ ಉಪಕುಲಪತಿಗಳು, ಧಾರವಾಡ, ವಿಶ್ವವಿದ್ಯಾನಿಲಯ ಇವರನ್ನು ಏಕಸದಸ್ಯ ನಿಯಂತ್ರಕ ಸಮಿತಿಯನ್ನಾಗಿ ರಚಿಸಲಾಗಿದೆ.

ಮೇಲೆ ತಿಳಿಸಿದಂತೆ ಕಾಲೇಜುಗಳು ನಿಗಧಿತ ಶುಲ್ಕಕ್ಕಿಂತ ಹೆಚ್ಚುವರಿ ಮೊತ್ತವನ್ನು ಪಾವತಿಸಿಕೊಳ್ಳುತ್ತಿರುವ/ಪಾವತಿಸಿಕೊಳ್ಳದಿರುವ ಬಗ್ಗೆ ತಾಂತ್ರಿಕ ಶಿಕ್ಷಣ ನಿರ್ದೇಶಕರು ಸಂಪೂರ್ಣ ವಿವರಗಳನ್ನು ಆಯಾ ಕಾಲೇಜುಗಳಿಂದ ಮಾಹಿತಿ ಪಡೆದು ಏಕಸದಸ್ಯ ಸಮಿತಿಗೆ ಕಳುಹಿಸಿ, ಸದರಿ

ಸಮಿತಿಯು ನೀಡಿದ ಅಭಿಪ್ರಾಯಾನುಸಾರ ಪ್ರವೇಶಾನುಮತಿಯನ್ನು ನೀಡಲು ಕ್ರಮ ವಹಿಸಬೇಕೆಂದು ನಿರ್ಧರಿಸಲಾಗಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ:ಇಡಿ 111 ಟಿಇಸಿ 2013 ಬೆಂಗಳೂರು, ದಿನಾಂಕ: 02-08-2013**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ತಾಂತ್ರಿಕ ಶಿಕ್ಷಣ ನಿರ್ದೇಶಕರು ಈ ಕೆಳಕಂಡಂತೆ ಕ್ರಮ ವಹಿಸಬೇಕೆಂದು ಸರ್ಕಾರವು ಆದೇಶಿಸಿದೆ.

1) ದಿನಾಂಕ:15-8-2013ರೊಳಗಾಗಿ ಎಲ್ಲಾ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳ ಹೆಸರುಗಳು, ಇವರಿಂದ ವಿವಿಧ ಬಾಬ್ತುಗಳಡಿ ಪಾವತಿಸಿಕೊಳ್ಳಲಾದ ಹೆಚ್ಚುವರಿ ಮೊತ್ತ, ಸದರಿ ಮೊತ್ತವನ್ನು ಪಾವತಿಸಿಕೊಂಡಿರುವುದಾಗಿ ಪ್ರಾಂಶುಪಾಲರುಗಳಿಂದ ಪ್ರಮಾಣ ಪತ್ರವನ್ನು ಪಡೆಯತಕ್ಕದ್ದು ಹಾಗೂ ಸಂಬಂಧಿಸಿದ ಕಾಲೇಜುಗಳು ತಮ್ಮ ಕಾಲೇಜುಗಳ **Website** ನಲ್ಲಿ ಪ್ರಚುರಪಡಿಸುವಂತೆ ಪ್ರಾಂಶುಪಾಲರಿಗೆ ಸೂಚಿಸುವುದು.

2) ಕಾಲೇಜುಗಳ **Website** ನಲ್ಲಿ ಪ್ರಚುರಪಡಿಸಿದ 7 ದಿನಗಳೊಳಗೆ ಯಾವುದೇ ವಿದ್ಯಾರ್ಥಿ/ಪೋಷಕರಿಂದ ಕಾಲೇಜುಗಳು ಹೆಚ್ಚುವರಿ ಮೊತ್ತವನ್ನು ಪಾವತಿಸಿಕೊಂಡಿರುವುದಾಗಿ ದೂರುಗಳು ಬಂದಲ್ಲಿ ಅಂತಹ ದೂರುಗಳನ್ನು ತಾಂತ್ರಿಕ ಶಿಕ್ಷಣ ನಿರ್ದೇಶಕರು ಕೂಡಲೇ ಏಕಸದಸ್ಯ ಸಮಿತಿಗೆ ಕೂಲಂಕಷ ವಿಚಾರಣೆಗಾಗಿ ಕಳುಹಿಸತಕ್ಕದ್ದು.

3) ಏಕಸದಸ್ಯ ಸಮಿತಿಯು ತಾಂತ್ರಿಕ ಶಿಕ್ಷಣ ಇಲಾಖೆಯ ವತಿಯಿಂದ ಸ್ವೀಕರಿಸಿದ ವಿವರಗಳನ್ನು ಪರಿಶೀಲಿಸಿ ಸರ್ಕಾರ ನಿಗದಿಪಡಿಸಿದ ಶುಲ್ಕವನ್ನು ಮಾತ್ರ ಕಾಲೇಜುಗಳು ಪಾವತಿಸಿಕೊಂಡಿರುವುದಾಗಿ ತಿಳಿಸಿದ್ದಲ್ಲಿ ಮಾತ್ರ ತಾಂತ್ರಿಕ ಶಿಕ್ಷಣ ಇಲಾಖೆಯ ನಿರ್ದೇಶಕರು ಸದರಿ ಕಾಲೇಜುಗಳ ಪ್ರವೇಶಾತಿಗಳ ಅನುಮೋದನೆಯನ್ನು ನೀಡುವುದು. ಒಂದು ವೇಳೆ ನಿಗಧಿತ ಶುಲ್ಕಕ್ಕಿಂತ ಹೆಚ್ಚುವರಿ ಮೊತ್ತವನ್ನು ಪಾವತಿಸಿಕೊಂಡಿದ್ದ ಪಕ್ಷದಲ್ಲಿ ಅಂತಹ ಮೊತ್ತವನ್ನು ಕೂಡಲೇ ವಿದ್ಯಾರ್ಥಿಗಳಿಗೆ ಹಿಂದಿರುಗಿಸಲು ಸೂಕ್ತ ಅವಕಾಶ ನೀಡಿ ಅದನ್ನು ಪಾಲಿಸಿದ್ದಲ್ಲಿ ಮಾತ್ರ ಅಂತಹ ಪ್ರವೇಶಾತಿಗಳಿಗೆ ಸೂಕ್ತ ಅನುಮೋದನೆಯನ್ನು ನೀಡುವುದು.

ತಾಂತ್ರಿಕ ಶಿಕ್ಷಣ ನಿರ್ದೇಶಕರು ಮೇಲಿನಂತೆ ಕ್ರಮ ವಹಿಸಿಕೊಳ್ಳುತ್ತಿರುವ ಬಗ್ಗೆ ಇಲಾಖೆಯ **Website** ನಲ್ಲಿ ಪ್ರಚುರಪಡಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಜಿ.ನಾಗಭೂಷಣ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ. (ತಾಂತ್ರಿಕ ಶಿಕ್ಷಣ)

ಗೆ,
ಸಂಖ್ಯೆ: ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು.

ಹಿಂಬರಹ: ಸಂಖ್ಯೆ: ಡಿಟಿಇ 10 ಎಸಿಎಂ(1) 2013-14

-00000-

ದಿನಾಂಕ:12-08-2013.

ಈ ಸರ್ಕಾರಿ ಪತ್ರದಲ್ಲಿ ತಿಳಿಸಿರುವಂತೆ ರಾಜ್ಯದ ಇಂಜಿನಿಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲರುಗಳಿಗೆ ಮುಂದಿನ ಕ್ರಮಕೈಗೊಳ್ಳಲು ತಿಳಿಸಲಾಗಿದೆ.

ನಿರ್ದೇಶಕರು
12/8/13

ಇವರಿಗೆ,

ರಾಜ್ಯದ ಎಲ್ಲಾ ಸರ್ಕಾರಿ/ಅನುದಾನಿತ/ಖಾಸಗಿ ಇಂಜಿನಿಯರಿಂಗ್ ಕಾಲೇಜುಗಳ ಪ್ರಿನ್ಸಿಪಾಲರುಗಳಿಗೆ.